**O.S.– 1/2018 Clubbed with OS 80/2015**

**ಪಿ.ಡಬ್ಲ್ಯೂ– 7**

**ಸಾಕ್ಷಿಯನ್ನು ದಿಃ 18.02.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಆರ್.ಕೆ. ವಕೀಲರಿಂದ**

1. ನನಗೆ ವಿಷ್ಣು ಮೂರ್ತಿ ಎಂಬ ಒಬ್ಬ ತಮ್ಮ ಇದ್ದ ಎಂದರೆ ಸರಿ. ಆತನಿಗೆ ಮದುವೆ ಆಗಿರಲಿಲ್ಲ ಮತ್ತು ಮಕ್ಕಳು ಇರಲಿಲ್ಲ ಎಂದರೆ ಸರಿ. ವಿಷ್ಣು ಮೂರ್ತಿ ಸುಮಾರು 15 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಾಯಿ 1974 ರಲ್ಲಿಯೇ ಮೃತಪಟ್ಟಿರುತ್ತಾರೆ. ನಾವು ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಜನೆ ಮಾಡಿಕೊಳ್ಳದ ಕಾರಣ ವಿಷ್ಣು ಮೂರ್ತಿಯ ಪಾಲಿಗೆ ಯಾವುದೇ ಸ್ವತ್ತು ಹೋಗಿರುವುದಿಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಯಲ್ಲಿ ವಿಷ್ಣು ಮೂರ್ತಿ ಹೆಸರಿಗೆ 21 ಗುಂಟೆ ಎಂಬ ನಮೂದನೆ ಇರುತ್ತದೆ ಎಂದರೆ ಸರಿ. ನನ್ನ ತಂದೆ ಸುಮಾರು 10 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

2. ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಾಗಬೇಕಾದರೆ ತಹಶೀಲ್ದಾರ್ ರವರಿಂದ ಮ್ಯುಟೇಶನ್ ಆದೇಶವಾಗಬೇಕು ಎಂದರೆ ಸರಿ. ವಿಷ್ಣು ಮೂರ್ತಿ ಹೆಸರಿಗೆ ಖಾತೆ ಬದಲಾವಣೆಯಾಗಬೇಕೆಂದು ಸಾಗರದ ವಕೀಲರ ಮೂಲಕ ತಹಶೀಲ್ದಾರ್ ಕಚೇರಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದರಲ್ಲಿ ನನ್ನ ಸಹಿಯು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಿತಾವಧಿಯಲ್ಲಿ ನನ್ನ ಮತ್ತು ನನ್ನ ತಂದೆಯ ಸಂಬಂಧ ಉತ್ತಮವಾಗಿಯೇ ಇತ್ತು, ಉಳಿದ ವಾದಿಯರೊಂದಿಗೂ ನನ್ನ ಸಂಬಂಧ ಚೆನ್ನಾಗಿಯೇ ಇತ್ತು. 1 ನೇ ವಾದಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. 2 ನೇ ವಾದಿ ಮೈಸೂರಿನಲ್ಲಿ ವಾಸಿಸುತ್ತಿದ್ದರು. 4 ನೇ ವಾದಿ ತೀರ್ಥಹಳ್ಳಿಯಲ್ಲಿ ವಾಸಿಸುತ್ತಿದ್ದರು, ಈಗ ಸಾಗರದಲ್ಲಿಯೇ ವಾಸಿಸುತ್ತಿದ್ದಾರೆ. ನಾನು ಮೊದಲು ಭದ್ರಾವತಿಯಲ್ಲಿ ವಾಸಿಸುತ್ತಿದ್ದೆ, ಈಗ ಸಾಗರದಲ್ಲಿಯೇ ವಾಸಿಸುತ್ತಿದ್ದೇನೆ. 5 ನೇ ವಾದಿ ಮೊದಲು ಬೆಂಗಳೂರಿನಲ್ಲಿ ವಾಸಿಸುತ್ತಿದ್ದ, ಈಗ ಆರೋಗ್ಯ ಸರಿ ಇಲ್ಲದ ಕಾರಣ ಸಾಗರದಲ್ಲಿಯೇ ವಾಸಿಸುತ್ತಿದ್ದಾರೆ. 6 ನೇ ವಾದಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ.

3. ನನ್ನ ಹಾಗೂ ಉಳಿದ ವಾದಿಯರ ವಿರುದ್ಧ 1 ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆ 80/2015 ನ್ನು ಶಾಶ್ವತ ನಿರ್ಭಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿದ್ದರು ಎಂದರೆ ಸರಿ.

ಸದರಿ ದಾವೆಯಲ್ಲಿ ನಾವುಗಳು ಪ್ರತಿವಾದಿಯರ ದಾವಾ ಸ್ವತ್ತಿನ ಸ್ವಾಧೀನತೆಗೆ ಅಡ್ಡಿ ಆತಂಕ ಉಂಟು ಮಾಡದಂತೆ ನಮ್ಮ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾವು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನನ್ನ ತಂದೆ ಜೀವಂತವಿದ್ದಾಗ ಅವರೊಂದಿಗೆ 1 ಮತ್ತು 2 ನೇ ಪ್ರತಿವಾದಿಯರು ವಾಸಿಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಂದೆಯ 2 ನೇ ಪತ್ನಿ, 2 ಮತ್ತು 3 ನೇ ಪ್ರತಿವಾದಿಯರು ಅವರ ಮಕ್ಕಳು ಎಂದರೆ ಸರಿ.

4. ನನ್ನ ತಂದೆ ಮೃತಪಡುವ ಸಮಯದಲ್ಲಿ ನಾನು ಅವರೊಂದಿಗೆ ಇರಲಿಲ್ಲ. ಉಳಿದ ವಾದಿಯರೂ ಸಹ ನನ್ನ ತಂದೆಯ ಜೊತೆ ಅವರು ಮೃತಪಡುವ ಸಮಯದಲ್ಲಿ ಇರಲಿಲ್ಲ. ನನ್ನ ತಂದೆ ಸಾಯುವ 15 ದಿನಗಳ ಮುಂಚೆ ನಾನು ಅವರನ್ನು ನೋಡಿರುತ್ತೇನೆ. ಆ ಸಮಯದಲ್ಲಿ ಅವರು ಮಾತನಾಡುತ್ತಿದ್ದರು, ಓಡಾಡುತ್ತಿರಲಿಲ್ಲ. ನನ್ನ ತಂದೆ ನನ್ನ ಗುರುತನ್ನು ಹಿಡಿಯುತ್ತಿದ್ದರು.

**ಪ್ರತಿವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ